KACM010012902019

Presented on : 18-06-2019
Registered on : 18-06-2019

**IN THE COURT OF**
**PRL. DISTRICT AND SESSIONS JUDGE. CHIKKAMAGALURU**
**AT Chikkamagaluru,CHIKKAMAGALURU**
**(Presided Over by RAJESHWARI N. HEGDE)**

**S.C (SESSION CASES)/62/2019**

Complainant(PROSECUTION):
State by Koppa Police, Rep. by Public Prosecutor, CKM

**VERSUS**

Accused:
1. Doreswamy, S/o Challamuttu, 46 yrs, Labourer, R/o Hanuman Nagara, Binthravalli Village, Koppa Taluk

2:Vital S/o Seena Poojari, 46 yrs, Labourer, R/o Kooge, Nuggi Village, Koppa Taluk

3:Devid Sachin Lobo, S/o Veleniyan Lobo, 26 yrs, Labourer, R/o Devan Estate, Nuggi Village, Koppa Taluk

----------------------------------------------------------------------------

State Complainant}: Public Prosecutor,
Sri. H A THEJASWI appearing for A-1 to 3

----------------------------------------------------------------------------

**Offence punishable under : 379, of INDIAN PENAL CODE,**
**86, 87 of KARNATAKA FOREST ACT 1963,**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ಚಿಕ್ಕಮಗಳೂರು

**S.C. No: 62/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಕಾಂತರಾಜು | ಪ್ರಾ.ಸಾ.- 01 |
| ತಂದೆಯ ಹೆಸರು | : | ಕಲ್ಲಪ್ಪ | ಚಾ.ಸಾ.- 03 |
| ವಯಸ್ಸು | : | 44 ವರ್ಷ | |
| ಉದ್ಯೋಗ | : | ಕೂಲಿ ಕೆಲಸ | |
| ವಾಸ ಸ್ಥಳ | : | ಹನುಮಾನ್ ನಗರ, ಬಿಂತ್ರವಳ್ಳಿ, ಕೊಪ್ಪ ತಾಃ | |

**ದಿನಾಂಕಃ 19-06-2024**

**ಪ್ರಮಾಣ ವಚನ ಬೋಧಿಸಲಾಯಿತು.**

**ಂಃ ಮುಖ್ಯ ವಿಚಾರಣೆಃ ಮಾನ್ಯ ಪಿ.ಪಿ. ಯವರಿಂದಃ**

1. ನ್ಯಾಯಾಲಯದ ಮುಂದೆ ಇರುವ 1 ರಿಂದ 3 ರವರೆಗಿನ ಆರೋಪಿಗಳು ನನಗೆ ಗೊತ್ತು.

2. ಚಾಸಾ-1-ರಾಜು, ಚಾಸಾ-2 ಮೃತ ಶ್ರೀನಿವಾಸ್ ನನಗೆ ಗೊತ್ತು. 2/3 ವರ್ಷಗಳ ಹಿಂದೆ ಚಾಸಾ-2 ಮೃತಪಟ್ಟರು. ನಾವು ಡಾಕ್ಟರ್ ತೋಟಕ್ಕೆ ಕೂಲಿ ಕೆಲಸ ಮಾಡಲು ಹೋಗುತ್ತಿದ್ದೆವು, ಹೀಗಾಗಿ ನನಗೆ ಚಾಸಾ-1 ಗೊತ್ತು.

3. ದಿನಾಂಕಃ 29-01-2019 ರಂದು ರಾತ್ರಿ 11.00 ಗಂಟೆಗೆ ಚಾಸಾ-1 ರಾಜು ಮನೆಯಲ್ಲಿದ್ದ ನನಗೆ ಫೋನ್ ಮಾಡಿ, ಚಾಸಾ-2 ಶ್ರೀನಿವಾಸ್ ಇವರಿಗೆ ಹೇಳಿದ್ದೇನೆ, ಡಾಕ್ಟರ್ ಅವರ ತೋಟದ ಹಳೆ ಮನೆಯಲ್ಲಿ ಲೈಟ್ ಉರಿಯುತ್ತಿದೆ ಎಂದು, ಅಲ್ಲಿಂದ ಏನೋ ಶಬ್ದ ಬರುತ್ತಿದೆ ಬನ್ನಿ ಎಂದು ನನಗೆ ಹೇಳಿದರು. ಆಗ ನಾನು, ಚಾಸಾ-1-ರಾಜು, ಚಾಸಾ-2-ಶ್ರೀನಿವಾಸ್ ಇವರೊಂದಿಗೆ ಡಾಕ್ಟರ್ ತೋಟಕ್ಕೆ ಹೋದೆವು.

4. ಆ ತೋಟದಲ್ಲಿರುವ ಮನೆಯ ಒಳಗಿನಿಂದ ಶಬ್ದ ಬರುತ್ತಿತ್ತು. ಕಿಟಕಿ ಮೂಲಕ ನೋಡಿದಾಗ ಮನೆಯ ಒಳಗೆ 3 ಜನ ಗಂಧದ ಚಕ್ಕೆಗಳನ್ನು ಕೆತ್ತುತ್ತಿದ್ದರು. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ದೊರೆಸ್ವಾಮಿ, 2 ನೇ ಆರೋಪಿ ವಿಠಲ್, 3 ನೇ ಆರೋಪಿ ಡೇವಿಡ್ ಸಚಿನ್ ಲೋಬೋ ಆ ರೀತಿ ಮಾಡುತ್ತಿದ್ದದ್ದು.

5. ಚಾಸಾ-1 ರಾಜು ಬಾಗಿಲನ್ನು ತಟ್ಟಿದರು, 1 ನೇ ಆರೋಪಿ ದೊರೆಸ್ವಾಮಿ ಬಂದು ಬಾಗಿಲನ್ನು ತೆಗೆದಿದ್ದು. ನಾವು 3 ಜನ ಒಳಗೆ ಹೋದೆವು. ಕೆತ್ತಿದ 6 ಶ್ರೀಗಂಧದ ತುಂಡುಗಳು, 13 ಶ್ರೀಗಂಧದ ಚಕ್ಕೆಗಳು, 1 ಗರಗಸ, 1 ಹಣೆ ಬ್ಯಾಟರಿ, ಮಂಡಗತ್ತಿ, ಚೀಲ ಕಂಡು ಬಂದವು. 3 ನೇ ಆರೋಪಿ ಓಡಲು ಪ್ರಯತ್ನಪಟ್ಟನು, ಆಗ ಬಾಗಿಲು ಆತನ ತಲೆಗೆ ಬಡಿಯಿತು, 3 ನೇ ಆರೋಪಿಯನ್ನು ಆಸ್ಪತ್ರೆಗೆ ಸೇರಿಸಿದೆವು, 1 ಮತ್ತು 2 ನೇ ಆರೋಪಿಗಳನ್ನು ಹಾಗೆಯೇ ಕರೆದೊಯ್ದು ಕೊಪ್ಪ ಪೊಲೀಸ್ ಠಾಣೆಗೆ ಒಪ್ಪಿಸಿದೆವು.

6. ಆರೋಪಿಗಳನ್ನು ಕೇಳಿದಾಗ ಚಾಸಾ-1 ಇವರ ತೋಟದ ಪಕ್ಕ ರಾಜೇಶ್ ಅವರಿಗೆ ಸೇರಿದ ತೋಟ ಇದೆ, ಅವರ ತೋಟದಿಂದ ಮರವನ್ನು ಕಡಿದು ತಂದಿದ್ದೇವೆ ಎಂದು ಹೇಳಿದರು. ಗಂಧದ ತುಂಡುಗಳ ಬೆಲೆ ರೂ.5,000/-ಗಳು ಆಗಬಹುದು ಎಂದು ಅಂದಾಜು ಮಾಡಿದೆವು. ಮೇಲೆ ಹೇಳಿದ ಎಲ್ಲಾ ವಸ್ತುಗಳನ್ನು ಗಂಧದ ತುಂಡುಗಳೊಂದಿಗೆ ಪೊಲೀಸರ ಮುಂದೆ ಹಾಜರುಪಡಿಸಲಾಯಿತು.

7. ಸಾಕ್ಷಿದಾರರು 6 ತುಂಡುಗಳನ್ನು ಸ್ಥಳದಲ್ಲಿ ನೋಡಿ, ಪೊಲೀಸರಿಗೆ ಅದೇ ದಿನ ಒಪ್ಪಿಸಿದ ಗಂಧದ ತುಂಡುಗಳು ಇವೇ ಇರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ, ಆ 6 ತುಂಡುಗಳನ್ನು ಸೇರಿಸಿ ಮುದ್ದೆಮಾಲು-1 ಎಂದು ಗುರುತಿಸಲಾಯಿತು. ಅದೇ ರೀತಿ ಆ ದಿನ ಸ್ಥಳದಲ್ಲಿ ನೋಡಿ ಪೊಲೀಸರಿಗೆ ಒಪ್ಪಿಸಿದ 13 ಗಂಧದ ಚಕ್ಕೆಗಳು ಇವೇ ಇರುತ್ತವೆ ಎಂದು ಸಾಕ್ಷಿದಾರರು ಗುರುತಿಸಿರುತ್ತಾರೆ (ಎಣಿಸಲಾಗಿ ಒಟ್ಟು 17 ಗಂಧದ ಚಕ್ಕೆಗಳು ಅಂದರೆ ಸ್ವಲ್ಪ ದೊಡ್ಡ ಸೈಜಿನ ಚಕ್ಕೆಗಳು

ಇರುತ್ತವೆ. ಈ 17 ರ ಪೈಕಿ 13 ಗಂಧದ ಚಕ್ಕೆಗಳನ್ನು ನಾನು ಗುರುತಿಸಬಲ್ಲೆ ಎಂದು ಸಾಕ್ಷಿದಾರರು ಹೇಳಿರುತ್ತಾರೆ, ಈ ಸಮಯಲ್ಲಿ ಆರೋಪಿ ಪರ ವಕೀಲರಾದ ಶ್ರೀ ಹೆಚ್ ಎ ಟಿ ವಕೀಲರು ಸಾಕ್ಷಿದಾರರು ಗುರುತಿಸಿದ ನಂತರ ಅವುಗಳನ್ನು ಈ ದಿನ ಮಾರ್ಕ್ ಮಾಡಿದಲ್ಲಿ, ಚಾಸಾ-1 ಅವುಗಳನ್ನೇ ಗುರುತಿಸುತ್ತಾರೆ, ಕಾರಣ ಇಬ್ಬರೂ ಸಾಕ್ಷಿದಾರರಿಂದಲೂ ಒಂದೇ ದಿನ ಸಾಕ್ಷ್ಯ ವಿಚಾರಣೆಯನ್ನು ಮಾಡಿ, ಆ ದಿನ ಅವುಗಳನ್ನು ಗುರುತಿಸಬಹುದಾಗಿರುತ್ತದೆ ಎಂದು ಕೇಳಿಕೊಂಡಿರುತ್ತಾರೆ, ಕಾರಣ ಇವುಗಳನ್ನು ಈ ದಿನ ಗುರುತಿಸಿಲ್ಲ.)

8. ಆ ದಿನ ಸ್ಥಳದಲ್ಲಿ ಇದ್ದ ಗರಗಸ ಇದೇ ಇರುತ್ತದೆ, ಅದನ್ನು ಮುದ್ದೆಮಾಲು-2 ಎಂದು ಗುರುತಿಸಲಾಯಿತು. ಮಂಡಗತ್ತಿ ಸಹಾ ಇದೇ ಇರುತ್ತದೆ, ಅದನ್ನು ಮುದ್ದೆಮಾಲು-3 ಎಂದು ಗುರುತಿಸಲಾಯಿತು. ಆ ದಿನ ಅವರೊಂದಿಗೆ ಇದ್ದ ಹಣೆ ಬ್ಯಾಟರಿ ಇದೇ ಇರುತ್ತದೆ, ಅದನ್ನು ಮುದ್ದೆಮಾಲು-4 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಇದ್ದ ಚೀಲ ಇದೇ ಇರುತ್ತದೆ, ಅದನ್ನು ಮುದ್ದೆಮಾಲು-5 ಎಂದು ಗುರುತಿಸಲಾಯಿತು.

(ಈ ಸಾಕ್ಷಿದಾರರ ಮುಂದುವರಿದ ಮುಖ್ಯ ವಿಚಾರಣೆಯನ್ನು ಚಾಸಾ-1 ಇವರ ಮುಖ್ಯ ವಿಚಾರಣೆಯನ್ನು ಒಂದೇ ದಿನ ಮಾಡಬೇಕೆಂದು ಸಮಯ ಕೇಳಿರುತ್ತಾರೆ, ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

**ಓ.ಹೇ.ಕೇ.ಸ.ಇ.ಎ.ಒ.**

**Sd/-19-06-2024**
**(ಶುಭ ಗೌಡರ್)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಮಗಳೂರು.**

ಸಾಕ್ಷಿ ಸಹಿ:-

Visit **ecourts.gov.in** for updates or download mobile app “**eCourts Services**” from Android or iOS